ಸಂ/ಉನಿಸಕಇ/ಡಿ6/ಸಿಆರ್1 /17-18

ಉಪ ನಿರ್ದೇಶಕರ ಕಛೇರಿ,
ಸಮಾಜ ಕಲ್ಯಾಣ ಇಲಾಖೆ
ಹಾಸನ ಜಿಲ್ಲೆ, ಹಾಸನ ದಿ:15/03/2018.

## ಸ್ಥಳ ಮಹಜರ್ ವರದಿ

ಶ್ರವಣಬೆಳಗೊಳದಲ್ಲಿ ನಡೆಯುತ್ತಿರುವ ಮಹಾಮಸ್ತಕಾಭಿಷೇಕ ಸಂಬಂಧ ತಾತ್ಕಾಲಿಕವಾಗಿ ನಿರ್ಮಿಸಿರುವ ಶೌಚಾಲಯಗಳ ವ್ಯವಸ್ಥೆ ಬಗ್ಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಶ್ರೀ ಆರ್.ಕೃಷ್ಣ ಮತ್ತು ಶ್ರೀ ಕೆ.ಬಿ.ಓಬಳೇಶ ರವರುಗಳು ನೀಡಿದ್ದ ದೂರು ಪ್ರಕರಣ ಸಂಖ್ಯೆ ಎಸ್.ಕೆ.ಸಿ 272/2017-18ಕ್ಕೆ ಸಂಬಂಧಿಸಿದಂತೆ ದಿನಾಂಕ: 8/03/2018 ರಂದು ನಡೆದ ವಿಚಾರಣಾ ವರದಿಯಲ್ಲಿ ದೂರುದಾರರು ನೀಡಿದ್ದ ದೂರಿನ ಬಗ್ಗೆ ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಶ್ರವಣಬೆಳಗೂಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಚನ್ನರಾಯಪಟ್ಟಣ ತಹಶೀಲ್ದಾರ್, ನಗರ ನೀರು ಸರಬರಾಜು ಮಂಡಳಿಯ ಕಾರ್ಯಪಾಲಕ ಅಭಿಯಂತರರು ಮತ್ತು ದೂರುದಾರರಾದ ಶ್ರೀ ಆರ್.ಕೃಷ್ಣ ಮತ್ತು ಶ್ರೀ ಕೆ.ಬಿ.ಓಬಳೇಶ ರವರುಗಳು ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನಾ ವರದಿ ಸಲ್ಲಿಸಲು ಆದೇಶಿಸಿರುವಂತೆ ಮೇಲ್ಕಂಡ ಸಮಿತಿಯು ದಿನಾಂಕ 15/03/2018 ರಂದು ಮಧ್ಯಾಹ್ನ 3.30 ಗಂಟೆಗೆ ಶ್ರವಣಬೆಳಗೊಳದ ತ್ಯಾಗಿ ನಗರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದಂತೆ ಸ್ಥಳ ಪರಿಶೀಲನಾ ವರದಿಯು ಈ ಕೆಳಕಂಡಂತಿರುತ್ತದೆ.

ಚನ್ನರಾಯಪಟ್ಟಣ ತಾಲ್ಲೂಕು, ಶ್ರವಣಬೆಳಗೊಳ ಕ್ಷೇತ್ರದ ತ್ಯಾಗಿ ನಗರದಲ್ಲಿ ಮುನಿಗಳು ಮತ್ತು ಮಾತಾಜಿಗಳು ಯಾರೂ ವಾಸವಿಲ್ಲದಿರುವುದು ಕಂಡುಬಂದಿರುತ್ತದೆ ಶ್ರವಣಬೆಳಗೂಳದ ತ್ಯಾಗಿ ನಗರದಲ್ಲಿದ್ದ ಮುನಿಗಳು ಶ್ರವಣಬೆಳಗೂಳದಿಂದ ಬೇರೆ ಸ್ಥಳಗಳಿಗೆ ನಿರ್ಗಮಿಸಿರುತ್ತಾರೆ.ಜೈನಮುನಿಗಳಿಗೆ ಶೌಚಕ್ಕೆ ಹೋಗಲು ನಿರ್ಮಿಸಿರುವ ಸ್ಥಳದ ಪಕ್ಕದಲ್ಲಿ ನಲ್ಲಿಗಳನ್ನು ಅಳವಡಿಸಿದ್ದು, ಶೌಚಕ್ಕೆ ಹೋದ ನಂತರ ಶೌಚದ ಹಿಂಭಾಗದಲ್ಲಿ ನಿರ್ಮಿಸಿರುವ ಗುಂಡಿಗೆ ಹೋಗುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ. ಗುಂಡಿಗಳನ್ನು ತಗಡು ಶೀಟ್‌ಗಳಿಂದ ಮುಚ್ಚಲಾಗಿರುತ್ತದೆ. ಪ್ರಸ್ತುತ ಕೆಲವು ಶೌಚಾಲಯಗಳಲ್ಲಿ ಒಣಗಿದ ಮಲದ ಪೀಸ್ ಗಳಿದ್ದು, ಮಲದ ವಾಸನೆ ಬರುತ್ತಿರುತ್ತದೆ. ಬೇಟಿ ದಿನಾಂಕದಂದು ಮುನಿಗಳಿಗೆ ನಿರ್ಮಿಸಲಾಗಿದ್ದ ಶೌಚಾಲಯಗಳನ್ನು ಯಾರು ಉಪಯೋಗಿಸದಿರುವುದು ಕಂಡುಬಂದಿರುತ್ತದೆ. ತಾತ್ಕಾಲಿಕವಾಗಿ ನಿರ್ಮಿಸಿರುವ ಶೆಡ್ ಗಳನ್ನು ತೆರವು ಗೊಳಿಸಲಾಗುತ್ತಿರುತ್ತದೆ. ಸ್ಥಳ ಮಹಜರ್ ಮಾಡಿದ ಫೋಟೋಗಳನ್ನು ಲಗತ್ತಿಸಿ ಸಲ್ಲಿಸಿದೆ.

| | | |
|---|---|---|
| ಸಹಾಯಕ ಕಾರ್ಯಪಾಲಕ ಅಭಿಯಂತರರು<br>ನಗರ ನೀರು ಸರಬರಾಜು ಮಂಡಳಿ<br>ಹಾಸನ | ತಹಶೀಲ್ದಾರ್ ರವರ ಪರವಾಗಿ<br>ತಾಲ್ಲೂಕು ಕಛೇರಿ<br>ಚನ್ನರಾಯಪಟ್ಟಣ | 15/3/18<br>ಉಪ ನಿರ್ದೇಶಕರು<br>ಸಮಾಜ ಕಲ್ಯಾಣ ಇಲಾಖೆ,<br>ಹಾಸನ ಜಿಲ್ಲೆ, ಹಾಸನ. |
| ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು<br>ಶ್ರವಣಬೆಳಗೂಳ | ಶ್ರೀ.ಆರ್ ಕೃಷ್ಣ<br>ದೂರುದಾರರು | 15/3/18<br>ಶ್ರೀ.ಕೆ.ಬಿ ಓಬಳೇಶ್<br>ದೂರುದಾರರು |